<u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ</u>

<u>ರಾಣೇಬೆನ್ನೂರು.</u>

<u>ಸಿಸಿ ನಂಬರಃ 960/2019</u>

ಸಿ ಡಬ್ಲ್ಯೂ -10

ಪಿ ಡಬ್ಲ್ಯೂ-6

| | | |
|---|---|---|
| **ಸಾಕ್ಷಿದಾರರ ಹೆಸರು** | : | ವಿಷ್ಣೋಜಿ |
| **ತಂದೆ/ಗಂಡನ ಹೆಸರು** | : | ವೆಂಕಪ್ಪ ನಾಗರಜ್ಜಿ |
| **ವಯಸ್ಸು** | : | 50 ವರ್ಷ |
| **ಉದ್ಯೋಗ** | : | ವ್ಯವಸಾಯ |
| **ವಾಸ** | : | ಅರೇಮಲ್ಲಾಪುರ |

**<u>ದಿನಾಂಕಃ 29-01-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ</u>**

ಚಾಸಾ-1 ಪಿರ್ಯಾದಿ ನನ್ನ ಅಳಿಯ. ಅದೇ ರೀತಿ ಚಾಸಾ-4 ನನ್ನ ಅಳಿಯ. ಚಾಸಾ-5 ರಿಂದ ಚಾಸಾ-9 ರವರ ಪರಿಚಯವಿದೆ. ಸುಮಾರು 4-5 ವರ್ಷಗಳ ಹಿಂದೆ ನಮ್ಮ ಹೊಲದಿಂದ ಎರಡು ಹೊಲ ಆದ ನಂತರ ಚಳಗೇರಿ ಹೋಗುವ ರಸ್ತೆಯ ಹತ್ತಿರ ಚಾಸಾ-1 ರವರ ಹೊಲ ಇದೆ. ಆ ಹೊಲದಲ್ಲಿ ದನ ಕಟ್ಟಲು ಒಂದು ಮನೆ ಕಟ್ಟಿಕೊಂಡಿದ್ದಾರೆ. ಆ ಮನೆಯಲ್ಲಿ ದನಗಳು ಹಾಗೂ 2-3 ಕುರಿಗಳನ್ನು ಸಾಕುತ್ತಿದ್ದರು. 2019 ನೇ ಇಸವಿಯಲ್ಲಿ ಒಂದು ರಾತ್ರಿ ಸಂಜೆ 07.00 ಗಂಟೆಯ ಸಮಯದಲ್ಲಿ ಮೂರು ಜನರು ಚಾಸಾ-1 ರವರ ಮನೆಗೆ ಕುರಿ ಕಳ್ಳತನ ಮಾಡಲು ಬಂದಿದ್ದರು. ಆಗ ಮೂರು ಜನ ವ್ಯಕ್ತಿಗಳು ಕುರಿ ಕಳ್ಳತನ ಮಾಡಿಕೊಂಡ ಹೋಗುತ್ತಿದ್ದ ವ್ಯಕ್ತಿಗಳನ್ನು ಹಿಡಿದುಕೊಂಡು ಠಾಣೆಗೆ ಕರೆದುಕೊಂಡು ಹೋಗಿದ್ದರು. ನಾನು ಪೋಲಿಸರಿಗೆ ಈ ಬಗ್ಗೆ ಹೇಳಿಕೆ ಕೊಟ್ಟಿರುತ್ತೇನೆ. ನಾನು ಆರೋಪಿಗಳನ್ನು ನೋಡಿಲ್ಲ. ನಾನು ಆರೋಪಿಗಳ್ನು ಗುರುತಿಸಿದ ಬಗ್ಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

( ಈ ಹಂತದಲ್ಲಿ ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸ.ಸ.ಅ ಅವರು ನಿವೇದಿಸಿಕೊಂಡಿದ್ದು ಸದರಿ ನಿವೇದನೆಯನ್ನು ಪರಿಗಣಿಸಿ ಸ.ಸ.ಅ ಅವರಿಗೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ`</u>**

ದಿನಾಂಕ 25-03-2019 ರಂದು ಸಂಜೆ 07.00 ಗಂಟೆಯ ಸಮಯದಲ್ಲಿ ಮೂರು

ಜನ ಆರೋಪಿತರನ್ನು ಕುರಿ ಕಳ್ಳತನ ಮಾಡಿದ್ದ ಜಾಗಕ್ಕೆ ಕರೆದುಕೊಂಡು ಬಂದಿದ್ದರು ನಾನು ಆರೋಪಿತರನ್ನು ನೋಡಿದ ಬಗ್ಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ನಿಜ.

**ಪಾಟೀ ಸವಾಲು : 2 ನೇ ಆರೋಪಿತರ ಪರ ಶ್ರೀ ವಿವಿಕೆ ವಕೀಲರಿಂದಃ**

ಘಟನೆ ಯಾವ ದಿನಾಂಕ ಆಯಿತು ಎಂದರೆ ನನಗೆ ದಿನಾಂಕ ಗೊತ್ತಿಲ್ಲ. ಘಟನೆಯನ್ನು ನಾನು ನೋಡಿಲ್ಲ ಎಂದರೆ ನಿಜ. ಅಕ್ಕ ಪಕ್ಕದವರು ಮಾತನಾಡಿಕೊಳ್ಳುತ್ತಿದ್ದ ವಿಚಾರವನ್ನು ಹೇಳುತ್ತಿದ್ದೇನೆ ಎಂದರೆ ನಿಜ. ನಾನು ಆರೋಪಿಗಳನ್ನು ನೋಡಿಲ್ಲ ಎಂದರೆ ನಿಜ.

**ಪಾಟೀ ಸವಾಲು : 3 ನೇ ಆರೋಪಿತರ ಪರ ಶ್ರೀ ಎಸ್ ಎನ್ ಕೆ ವಕೀಲರಿಂದಃ**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-

(ಬಿ.ಸಿದ್ದರಾಜು)

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.

## **ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ರಾಣೇಬೆನ್ನೂರು.**

**ಸಿಸಿ ನಂಬರಃ 960/2019**

ಸಿ ಡಬ್ಲ್ಯೂ -7

ಪಿ ಡಬ್ಲ್ಯೂ-5

| | | |
|---|---|---|
| **ಸಾಕ್ಷಿದಾರರ ಹೆಸರು** | : | ವೀರಭದ್ರಯ್ಯ |
| **ತಂದೆ/ಗಂಡನ ಹೆಸರು** | : | ವೀರಯ್ಯ |
| **ವಯಸ್ಸು** | : | 31 ವರ್ಷ |
| **ಉದ್ಯೋಗ** | : | ವ್ಯವಸಾಯ |
| **ವಾಸ** | : | ಅರೇಮಲ್ಲಾಪುರ |

**ದಿನಾಂಕಃ 29-01-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ**

ಚಾಸಾ-1 ಪಿರ್ಯಾದಿ ಪರಿಚಯವಿದ್ದಾರೆ. ಅದೇ ರೀತಿ ಚಾಸಾ-4 ರಿಂದ 6 ಹಾಗೂ ಚಾಸಾ-8 ರಿಂದ 10 ರವರು ನಮ್ಮ ಅಕ್ಕ ಪಕ್ಕದ ಜಮೀನಿನವರು ಆಗಿರುವ ಕಾರಣ ಪರಿಚಯವಿದ್ದಾರೆ. ನಮ್ಮ ಹೊಲದಿಂದ ಎರಡು ಹೊಲ ಆದ ನಂತರ ಚಳಗೇರಿ ಹೋಗುವ ರಸ್ತೆಯ ಹತ್ತಿರ ಚಾಸಾ-1 ರವರ ಹೊಲ ಇದೆ. ಆ ಹೊಲದಲ್ಲಿ ದನ ಕಟ್ಟಲು ಒಂದು ಮನೆ ಕಟ್ಟಿಕೊಂಡಿದ್ದಾರೆ. ಆ ಮನೆಯಲ್ಲಿ ದನಗಳು ಹಾಗೂ 2-3 ಕುರಿಗಳನ್ನು ಸಾಕುತ್ತಿದ್ದರು. 2019 ನೇ ಇಸವಿಯಲ್ಲಿ ಒಂದು ರಾತ್ರಿ ಸಂಜೆ 07.00 ಗಂಟೆಯ ಸಮಯದಲ್ಲಿ ಮೂರು ಜನರು ಚಾಸಾ-1 ರವರ ಮನೆಗೆ ಕುರಿ ಕಳ್ಳತನ ಮಾಡಲು ಬಂದಿದ್ದರು. ಆಗ ಮೂರು ಜನ ವ್ಯಕ್ತಿಗಳು ಕುರಿ ಕಳ್ಳತನ ಮಾಡಿಕೊಂಡ ಹೋಗುತ್ತಿದ್ದ ವ್ಯಕ್ತಿಗಳನ್ನು ಹಿಡಿದುಕೊಂಡು ಠಾಣೆಗೆ ಕರೆದುಕೊಂಡು ಹೋಗಿದ್ದರು. ನಾನು ಪೋಲಿಸರಿಗೆ ಈ ಬಗ್ಗೆ ಹೇಳಿಕೆ ಕೊಟ್ಟಿರುತ್ತೇನೆ. ನಾನು ಆರೋಪಿಗಳನ್ನು ನೋಡಿಲ್ಲ. ನಾನು ಆರೋಪಿಗಳ್ಳು ಗುರುತಿಸಿದ ಬಗ್ಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

( ಈ ಹಂತದಲ್ಲಿ ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸ.ಸ.ಅ ಅವರು ನಿವೇದಿಸಿಕೊಂಡಿದ್ದು ಸದರಿ ನಿವೇದನೆಯನ್ನು ಪರಿಗಣಿಸಿ ಸ.ಸ.ಅ ಅವರಿಗೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ`**

ದಿನಾಂಕ 25-03-2019 ರಂದು ಸಂಜೆ 07.00 ಗಂಟೆಯ ಸಮಯದಲ್ಲಿ ಮೂರು

ಸಿ ಡಬ್ಲ್ಯೂ -7

ಪಿ ಡಬ್ಲ್ಯೂ-5

ಜನ ಆರೋಪಿತರನ್ನು ಕುರಿ ಕಳ್ಳತನ ಮಾಡಿದ್ದ ಜಾಗಕ್ಕೆ ಕರೆದುಕೊಂಡು ಬಂದಿದ್ದರು ನಾನು ಆರೋಪಿತರನ್ನು ನೋಡಿದ ಬಗ್ಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ನಿಜ.

**ಪಾಟೀ ಸವಾಲು : 2 ನೇ ಆರೋಪಿತರ ಪರ ಶ್ರೀ ವಿವಿಕೆ ವಕೀಲರಿಂದಃ**

ಘಟನೆ ಯಾವ ದಿನಾಂಕ ಆಯಿತು ಎಂದರೆ ನನಗೆ ದಿನಾಂಕ ಗೊತ್ತಿಲ್ಲ. ಘಟನೆಯನ್ನು ನಾನು ನೋಡಿಲ್ಲ ಎಂದರೆ ನಿಜ. ಅಕ್ಕ ಪಕ್ಕದವರು ಮಾತನಾಡಿಕೊಳ್ಳುತ್ತಿದ್ದ ವಿಚಾರವನ್ನು ಹೇಳುತ್ತಿದ್ದೇನೆ ಎಂದರೆ ನಿಜ. ನಾನು ಆರೋಪಿಗಳನ್ನು ನೋಡಿಲ್ಲ ಎಂದರೆ ನಿಜ.

**ಪಾಟೀ ಸವಾಲು : 3 ನೇ ಆರೋಪಿತರ ಪರ ಶ್ರೀ ಎಸ್ ಎನ್ ಕೆ ವಕೀಲರಿಂದಃ**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-

(ಬಿ.ಸಿದ್ದರಾಜು)

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.